# ಶ್ರೀ ವಿಜಯದಾಸರು

ಕರ್ನಾಟಕದ ರಾಯಚೂರು ಜಿಲ್ಲೆಯ ಮಾನವಿ ಬಳಿಯಲ್ಲಿ ಚೀಕಲಪರವಿ ಗ್ರಾಮ ಐತಿಹಾಸಿಕ ಮಹತ್ತ್ವ ಪಡೆದ ಸ್ಥಳವಾಗಿದೆ. ಶ್ರೀಪಾದರಾಜರು ದೇಶಸಂಚಾರದ ಕಾಲದಲ್ಲಿ ಈ ಗ್ರಾಮಕ್ಕೆ ಬಂದವರು ಅಶ್ವತ್ಥವೃಕ್ಷ ಬೆಳಸಿ ಕಟ್ಟೆ ಕಟ್ಟಿ ಆ ವೃಕ್ಷದಡಿಯಲ್ಲಿ ಲಕ್ಷ್ಮೀನರಸಿಂಹದೇವರನ್ನು ಪ್ರತಿಷ್ಠಾಪಿಸಿ ಪುಣ್ಯಕ್ಷೇತ್ರವಾಗಿಸಿದರು. ಈ ಗ್ರಾಮದಲ್ಲಿ ಭಾರದ್ವಾಜಗೋತ್ರದ ಋಕ್‌ಶಾಖೆಗೆ ಸೇರಿದ ಬ್ರಾಹ್ಮಣ ಮನೆತನದ ಬಡ ದಂಪತಿಗಳು ಕಷ್ಟದಿಂದ ಬಾಳುವೆ ಮಾಡುತ್ತಿದ್ದರು. ಶ್ರೀನಿವಾಸಪ್ಪ-ಕೂಸಮ್ಮ ಆ ದಂಪತಿಗಳ ಹೆಸರು. ದೈವಭಕ್ತರಾದ ಇವರು ಶ್ರೀಪಾದರಾಜರಿಂದ ಸ್ಥಾಪಿತವಾದ ಲಕ್ಷ್ಮೀನರಸಿಂಹನನ್ನು ಆರಾಧಿಸುತ್ತಿದ್ದರು. ಇವರಿಗೆ ಮೂರು ಜನ ಮಕ್ಕಳಾದರು. ಇದರಲ್ಲಿ ಹಿರಿಯವನೇ ದಾಸಪ್ಪ. ಇವರೇ ಮುಂದೆ ವಿಜಯದಾಸರೆಂದು ಪ್ರಸಿದ್ಧರಾದವರು. ದಾಸಪ್ಪ ಜನಿಸಿದ್ದು ಶಾಲಿವಾಹನ ಶಕ 1604(ಕ್ರಿ.ಶ.1682) ದುಂದುಭಿ ಸಂವತ್ಸರದಲ್ಲಿ. ಮಕ್ಕಳ ಸಂಪತ್ತು ದೊರೆತರೂ ಧನ-ಧಾನ್ಯ ಸಂಪತ್ತು ದೊರೆಯಲಿಲ್ಲ. ಬಡತನದಲ್ಲೇ ಬಾಳ್ವೆ ಸಾಗಿತು. ಬುದ್ಧಿವಂತ ಬಾಲಕನಾಗಿ ಬೆಳೆದರೂ ದಾಸಪ್ಪನನ್ನು ಊರಿನವರು ಕೂಸೀಮಗ ದಾಸನೆಂದು ತಿರಸ್ಕಾರದಿಂದ ಕಾಣುತ್ತಿದ್ದರು. ಬಾಲ್ಯದಲ್ಲಿ ವಿಜಯದಾಸರು ದಾಸಪ್ಪನಾಗಿದ್ದಾಗ ಇದ್ದ ಬಡತನವನ್ನು ಜ್ಞಾಪಿಸಿಕೊಳ್ಳುತ್ತಾ 'ಸಂಜೆತನಕ ಇದ್ದು ಸಣ್ಣ ಸವಟು ತುಂಬ ಗಂಜಿ ಕಾಣದಲೆ ಬಳಲಿದೆನೊ' ಎಂದಿದ್ದಾರೆ.

ಬಡತನದಲ್ಲಿದ್ದರೂ ಕಾಲಕಾಲಕ್ಕೆ ನಡೆಯಬೇಕಾದ ಅಕ್ಷರಾಭ್ಯಾಸ, ಉಪನಯನ, ವಿವಾಹಗಳನ್ನು ತಂದೆ ತಾಯಿಯರು ನಿಲ್ಲಿಸಲಿಲ್ಲ. ಆ ಕಾಲದ ಸಂಪ್ರದಾಯಾನುಸಾರ ಅರಳಮ್ಮ ಎಂಬ ಕನ್ಯೆಯನ್ನು ತಂದು ದಾಸಪ್ಪನಿಗೆ ಮದುವೆ ಮಾಡಿ ಗೃಹಸ್ಥಪಟ್ಟ ಕಟ್ಟಿದರು. ಕೆಲವು ಕಾಲಾನಂತರ ಸಂಸಾರದ ತಾಪತ್ರಯವನ್ನು ತಾಳಲಾರದೆಯೋ, ಬಂಧುವರ್ಗದವರಿಂದ ಆಗುತ್ತಿದ್ದ ತಿರಸ್ಕಾರವನ್ನು ಸಹಿಸಲಾಗದೆಯೋ, ತನ್ನಿಂದ ಕುಟುಂಬ ರಕ್ಷಣೆ ಮಾಡಲಾಗದ ವ್ಯಥೆಯ ಕಾರಣದಿಂದಲೋ, ಬೇಸರ ಹೊಂದಿ ಯಾರಿಗೂ ತಿಳಿಸದೆ ದಾಸಪ್ಪನು ತನ್ನ ಹದಿನಾರನೆಯ ವಯಸ್ಸಿನಲ್ಲಿ ಮನೆಬಿಟ್ಟು ಹೊರಟನು. ಸಂಚಾರದ ಕಾಲದಲ್ಲಿ ಹತ್ತಿರವಿದ್ದ ಬಟ್ಟೆ -ಬರೆ, ಬುತ್ತಿ ಎಲ್ಲವನ್ನು ಕಳ್ಳರು ಅಪಹರಿಸಿದರು. ಇದರಿಂದ ಇನ್ನಷ್ಟು ವೈರಾಗ್ಯ ತಾಳಿ ಸಂಚಾರವನ್ನು ಮುಂದುವರೆಸಿದಾಗ ಮಾರ್ಗಮಧ್ಯದಲ್ಲಿ ಬಾವಾಜಿ ಸಂನ್ಯಾಸಿಗಳ ಗುಂಪನ್ನು ಸೇರಿ ಅವರಂತೆಯೇ ಆಚಾರ ವ್ಯವಹಾರಗಳನ್ನು ಅನುಸರಿಸುತ್ತಾ ಅನೇಕ ಯಾತ್ರಾ ಕ್ಷೇತ್ರಗಳನ್ನು ದರ್ಶಿಸುತ್ತಾ ಕಾಶೀಯಾತ್ರೆ ಮುಗಿಸಿ ರಾಮೇಶ್ವರ ಯಾತ್ರೆಗಾಗಿ ದಕ್ಷಿಣದತ್ತ ಬರುವಾಗ ಸುಮಾರು ನಾಲ್ಕು ವರ್ಷಗಳ ನಂತರ ತನ್ನ 20ನೆಯ ವಯಸ್ಸಿನಲ್ಲಿ ಚೀಕಲಪರಿವಿಗೆ ಬಂದಾಗ ಅವನನ್ನು ಕುಟುಂಬದವರು ಗುರುತಿಸಿದರು. ಮತ್ತೆ 'ಕಟ್ಟೆ ಕಲ್ಲು ಕಟ್ಟೆಗೆ ಕೂತಿತು' ಎಂಬಂತೆ ದಾಸಪ್ಪ ಗೃಹಸ್ಥಜೀವನಕ್ಕೆ ಮರಳಿದನು.

ದೇಶಸಂಚಾರ ಮಾಡಿ ಬಂದುದರಿಂದ ಸಾಕಷ್ಟು ಲೋಕಾನುಭವ ಉಂಟಾಗಿತ್ತು. ಜೀವನದಲ್ಲಿ ಕಷ್ಟ ಎಲ್ಲರಿಗೂ ಇದ್ದದ್ದೇ. ಅದನ್ನು ದಿಟ್ಟವಾಗಿ ಎದುರಿಸಬೇಕೇ ಹೊರತು ಅಂಜಿ ಹಿಂಜರಿಯಬಾರದು ಎಂಬ ಪಾಠ ಕಲಿತಿದ್ದನು. ಮತ್ತೆ ಧರ್ಮಿಷ್ಠನಾಗಿ ಬಾಳುವೆಗೆ ತೊಡಗಿದನು. ದೈವಕೃಪೆಯಿಂದ ಹದಿನೆಂಟು ಗ್ರಾಮಗಳ ಶಾನುಭೋಗಿಕೆ ದೊರೆತಿದ್ದರಿಂದ ಸ್ವಲ್ಪ ಮಟ್ಟಿಗೆ ಅನ್ನ ಬಟ್ಟೆಗೆ ನೆರವು ಸಿಕ್ಕಿ ಸಂಸಾರದಲ್ಲಿ ಸ್ವಲ್ಪ ನೆಮ್ಮದಿ ಸಿಗುವಂತಾಯಿತು. ಚಕ್ರದ ಅರೆಗಳ ಏಳುಬೀಳಿನ ಹಾಗೆ ಪರಿಸ್ಥಿತಿ ಸ್ವಲ್ಪ ಸುಧಾರಿಸಿತು ಎನ್ನುವ ವೇಳೆಗೆ ಮತ್ತೆ ಬಿಗಡಾಯಿಸುವ ಸ್ಥಿತಿ ಬಂದಿತು. ತಂದೆ ನಿಧನರಾಗಿ ಜವಾಬ್ದಾರಿ ಹೆಚ್ಚಿ ಯಾವುದೋ ಕಾರಣದಿಂದ ಹಣದ ಲೆಕ್ಕ ತಪ್ಪಿ ಸರ್ಕಾರಕ್ಕೆ ಹಣ ಕೊಡಬೇಕಾದ ಪರಿಸ್ಥಿತಿ ಬಂದಿತು. ಹಣವಿಲ್ಲದೆ ಮನಸ್ಸು ಅಶಾಂತವಾಯಿತು. ಅಪವಾದ, ಅವಮಾನ, ಆರ್ಥಿಕಸಂಕಷ್ಟ ಮತ್ತೆ ಉಂಟಾಗಿ ಜೀವನದಲ್ಲಿ ತಂದುಕೊಂಡಿದ್ದ ಧೈರ್ಯ-ಸ್ಥೈರ್ಯ ಕುಂದಿತು. ಕಂಗಾಲಾದ ದಾಸಪ್ಪ ಸಂಸಾರ ತೊರೆದು ಮತ್ತೆ ಕಾಶಿಯತ್ತ ಹೊರಟನು.

ಕ್ರಿ.ಶ 1714ರಲ್ಲಿ ದಾಸಪ್ಪ ತನ್ನ 32ನೆಯ ವಯಸ್ಸಿನಲ್ಲಿ ಕಾಶಿಯಾತ್ರೆ ಹೊರಟಾಗ ಯಥಾಪ್ರಕಾರ ಇದ್ದದ್ದನ್ನು ಕಳೆದುಕೊಂಡು ಕಾಶಿ ಸೇರಿ ಗಂಗೆಯಲ್ಲಿ ಮುಳುಗಿದನು. ಗಯೆಯಲ್ಲಿ ಪಿಂಡವನ್ನಿತ್ತು ಮರಳಿದನು. ಗಂಗಾನದಿಯ ದಡದಲ್ಲಿ ದಿನವೂ ಸ್ನಾನ, ವಿಶ್ವೇಶ್ವರನ ಧ್ಯಾನದಲ್ಲಿ ಕಾಲ ಕಳೆಯತೊಡಗಿದನು. ಈಗ ಸಾಕಷ್ಟು ಭಕ್ತನ ಲಕ್ಷಣಗಳನ್ನು ಹೊಂದಿದ್ದನು. ಸಜ್ಜನಸಂಗ, ಸದಾಚಾರ, ವಿಷಯವಿರಕ್ತಿ, ಗುರುಹಿರಿಯರಲ್ಲಿ ಭಕ್ತಿ ಭಗವಂತನಲ್ಲಿ ಅನುರಕ್ತಿ ಇಂಥ ಗುಣಗಳಿರುವ ಭಕ್ತರಿಗೆ ತತ್ತ್ವಾಭಿಮಾನಿ ದೇವತೆಗಳು ಪ್ರಸನ್ನರಾಗುತ್ತಾರಂತೆ. ಪ್ರಾಣದೇವರು ಕೃಪೆದೋರಿ ಶ್ರೀಹರಿಯ [illegible]ಲುಮೆ ದೊರೆಯುವ ಪಕ್ವತೆಗೆ ಭಕ್ತ ಬಂದಿರುತ್ತಾನೆ. ದಾಸಪ್ಪ ಅಂತಹ ಸ್ಥಿತಿಯನ್ನು ತಲುಪಿದ್ದನು.

ಒಂದು ದಿನ ಕಾಶಿಯಲ್ಲಿ ಗಂಗಾನದಿ ತೀರದ ಮಣಿಕರ್ಣಿಕಾಘಾಟಿನಲ್ಲಿ ಮಲಗಿದ್ದಾಗ ಅದ್ಭುತ ಸ್ವಪ್ನವೊಂದು ದಾಸಪ್ಪನಿಗೆ ಕಾಣಿಸಿತು. ಸ್ವಪ್ನದಲ್ಲಿ ಪುರಂದರದಾಸರೇ ಸಾಕ್ಷಾತ್ತಾಗಿ ಬಂದು ದಾಸಪ್ಪನ ಕೈಹಿಡಿದುಕೊಂಡು ಎಬ್ಬಿಸಿ ವ್ಯಾಸಕಾಶಿಗೆ ಕರೆದೊಯ್ದು ಅಲ್ಲಿ ವೇದವ್ಯಾಸರ ದರ್ಶನ ಮಾಡಿಸಿ ಮಧ್ವಶಾಸ್ತ್ರದ ತತ್ತ್ವೋಪದೇಶ ಕೇಳಿಸಿದಾಗ ವೇದವ್ಯಾಸರ ಅನುಗ್ರಹ ಆದಮೇಲೆ ಪುರಂದರದಾಸರು ದಾಸಪ್ಪನ ಬಾಯಿ ತೆಗೆಸಿ ನಾಲಿಗೆ ಮೇಲೆ ವಿಜಯವಿಠಲ ಬೀಜಾಕ್ಷರಗಳನ್ನು ಬರೆದು ಅಂಕಿತ ಪ್ರಧಾನ ಮಾಡಿದರು. ತಂಬೂರಿ, ತಾಳ ಗೆಜ್ಜೆಗಳನ್ನು ನೀಡಿ ಆಶೀರ್ವದಿಸಿದರು. ದಾಸಪ್ಪನ ಮನಸ್ಸಿನಲ್ಲಿದ್ದ ಅಶಾಂತಿ, ಆತಂಕ, ಚಿಂತೆ, ಕಳವಳಗಳೆಲ್ಲ ತೊಲಗಿ ಉತ್ಸಾಹ ತುಂಬಿತು. ಸ್ಫೂರ್ತಿ ಉಕ್ಕಿತು. ಭಕ್ತಿ-ಜ್ಞಾನ-ವೈರಾಗ್ಯಗಳು ಮೈಗೂಡಿದವು. ಕಾಲಲ್ಲಿ ಗೆಜ್ಜೆಯನಾದ ಹೊಮ್ಮಿ ಕೈಯಲ್ಲಿ ತಾಳ ತಟ್ಟಿ ಬೆರಳಲ್ಲಿ ತಂಬೂರಿ ಮೀಟಿ, ಬಾಯಲ್ಲಿ ಶ್ರೀಹರಿಗಾನ ಚಿಮ್ಮಿ ದಾಸಪ್ಪ ವಿಜಯದಾಸರಾದರು. 'ಅಂತರಂಗದ ಕದವು ತೆರೆಯಿತಿಂದು [illegible]ದ ಫಲವು ಪ್ರಾಪ್ತಿ ದೊರಕಿತೊ ಎನಗೆ' ಎಂದು ಹಾಡುತ್ತಾ 'ಹೃದಯಕಮ[illegible]ದೊಳಗಿರುವ ಶ್ರೀ ವಿಜಯವಿಠಲನ ಕಂಡೆ' ಎಂದು ನಲಿದಾಡಿದರು.

ವಿಜಯದಾಸರಿಗೆ ಗುರುಕರುಣ ದೊರೆತ ಮೇಲೆ ಬೇಡ ಬೇಡವೆಂದರೂ ಅಪಾರ ಐಶ್ವರ್ಯ, ಮೇಣೆ, ಆನೆ, ಕುದುರೆ, ತುರು, ಕರು, ಪರಿಚಾರಕವರ್ಗ ಎಲ್ಲವೂ ದಾಸರಲ್ಲಿ ಮೇಳವಿಸಿತು. ತಮಗೆ ಬಂದುದ್ದನ್ನೆಲ್ಲ ಭಕ್ತರ ಕಷ್ಟ ನಿವಾರಣಕ್ಕೆ, ಇಷ್ಟಪೂರಣಕ್ಕೆ ಕೃಷ್ಣಾರ್ಪಣವೆನ್ನುತ್ತ ಕೆರೆಯ ನೀರನ್ನು ಕೆರೆಗೆ ಚೆಲ್ಲಿದರು. ದಾಸರು ದಾಸರಾಗಿ ಉಳಿದರು. ಮುಂದಕ್ಕೆ ಹೊರಟರು. ವಿಜಯಯಾತ್ರೆ ಸಾಗಿತು. ಹೊದಲ್ಲೆಲ್ಲ ಜನ ದಾಸರ ಭಕ್ತಿಗಾಯನಕ್ಕೆ, ದಿವ್ಯ ತೇಜಕ್ಕೆ, ಅದ್ಭುತಾನುಗ್ರಹಕ್ಕೆ ಒಲಿದು ಬೆರಗಾದರು, ಶರಣಾದರು. ದಾಸರ ದಾಸರಾದರು. ದಾಸರ ಶಿಷ್ಯವೃಂದ ಹೆಚ್ಚತೊಡಗಿತು. ದಾಸರ ಶಿಷ್ಯರೆಷ್ಟು ಎಂಬುದು ಖಚಿತವಿಲ್ಲ. ಗೋಪಾಲದಾಸರು ''ಪ್ರತ್ಯಕ್ಷವಾಗಿ ಹತ್ತಿಪ್ಪತ್ತು ಜನರಿಗೆ ತತ್ತ್ವೋಪದೇಶ ಮಾಡಿ ವಿಜಯರಾಯ' ಎನ್ನುತ್ತಾರೆ. ಹತ್ತಿಪ್ಪತ್ತು ಎಂಬ ಪದವನ್ನು ಕೆಲವರು 30 ಜನರೆಂದು ಅರ್ಥೈಸಿದ್ದರೆ ಮತ್ತೆ ಕೆಲವರು 20ಜನರೆಂದು ಅರ್ಥೈಸಿದ್ದಾರೆ. ಹೊನ್ನಾಳಿ ವೆಂಕಟದಾಸರು 'ಆರುಮೂರೆರಡೊಂದು ಜನರು' ಎಂದರೆ 37ಜನವೆಂದು ತಮ್ಮ ಪದವೊಂದರಲ್ಲಿ ಹೇಳಿದ್ದಾರೆ. ಒಟ್ಟಿನಲ್ಲಿ ಸಾಕಷ್ಟು ಶಿಷ್ಯವರ್ಗ ದಾಸರಿಗಿತ್ತು ಎಂದು ತಿಳಿಯುತ್ತದೆ. ಆ ಪೈಕಿ ಗೋಪಾಲದಾಸರು (ಬಾಗಣ್ಣ) ವೇಣುಗೋಪಾಲದಾಸರು (ಪಂಗನಾಮ ತಿಮ್ಮಣ್ಣದಾಸರು) ಮೋಹನದಾಸರು ಪ್ರಸಿದ್ಧರು.

ಹೀಗೆ ಭಕ್ತಿಯಲ್ಲಿ ಬಾಗಣ್ಣ, ಯುಕ್ತಿಯಲ್ಲಿ ಮೋಹನ್ನ, ಶಕ್ತಿಯಲ್ಲಿ ತಿಮ್ಮಣ್ಣ ಎಂಬಂತೆ ಮೂವರು ಪ್ರಸಿದ್ಧ ಶಿಷ್ಯರು ವಿಜಯದಾಸರ ಅನುಗ್ರಹಕ್ಕೆ ಪಾತ್ರರಾಗಿ ಶಿಷ್ಯ ಪರಂಪರೆ ಬೆಳೆಸಿ ಇಂದೂ ದಾಸಸಾಹಿತ್ಯ ಉಳಿಯಲು, ಬೆಳೆಯಲು ಕಾರಣಕರ್ತರಾಗಿದ್ದಾರೆ. ಇವರಲ್ಲದೆ ಇನ್ನೂ ಅನೇಕ ಶಿಷ್ಯರು ಇದ್ದು ಅವರಲ್ಲಿ ಇಬ್ಬರು ಶಿಷ್ಯರ ಸಂಗತಿ ಜಗಜ್ಜನಿತವಾಗಿದೆ. ಕಲ್ಲೂರು ಸುಬ್ಬಣ್ಣಾಚಾರ್ಯರು ಆ ಪೈಕಿ ಒಬ್ಬರು. ಇವರು ಪಂಡಿತರಾಗಿದ್ದು ಸುಧಾಪಾಠ ಹೇಳುವಲ್ಲಿ ಸುಧೀರರೆಂದು ತಿಳಿದಿದ್ದರು. ವಿಜಯದಾಸರ ವಿಜಯವೈಭವದ ಬಗ್ಗೆ ಸಹನೆ ಇಲ್ಲದೆ ಕೂಸೀಮಗ ದಾಸನೆಂದು ದಾಸರನ್ನು ಹಂಗಿಸುತ್ತಿದ್ದರು. ಸುಧಾಮಂಗಳಕ್ಕೆ ಅಪೇಕ್ಷಿಪಟ್ಟಾಗ ನಿಮ್ಮಂಥ ದಾಸರಿಗೆ ಸುಧಾ ತಿಳಿಯಲು ಸಾಧ್ಯವೇ, ಇದೇನು ಕನ್ನಡದ ಪದ ಪದ್ಯವೇ ಎಂದು ಹೀಗಳೆದರು. ಆಗ ಅಲ್ಲಿದ್ದ ಪರಿಚಾರಕನೊಬ್ಬನಿಂದ ವಿಜಯದಾಸರು ಸುಧಾವ್ಯಾಖ್ಯಾನ ಮಾಡಿಸಿದಾಗ ಸುಬ್ಬಣ್ಣನವರ ಅಹಂ ಕರಗಿ ಜ್ಞಾನೋದಯವಾಗಿ ದಾಸರಿಗೆ ಶರಣಾದರು. ಆಗ ವಿಜಯದಾಸರು ತಮ್ಮ ಶಿಷ್ಯರಾದ ಪಂಗನಾಮ ತಿಮ್ಮಣ್ಣದಾಸರಿಂದ ಸುಬ್ಬಣ್ಣಾಚಾರ್ಯರಿಗೆ 'ವ್ಯಾಸವಿಠಲ' ಎಂಬ ಅಂಕಿತವನ್ನು ಕರುಣಿಸಿದರು. ಇವರು ರಚಿಸಿದ ದೇವರನಾಮಗಳ ಪೈಕಿ 'ವಿಜಯಕವಚ'ವೆಂದು ಪ್ರಸಿದ್ಧವಾದ ಕೀರ್ತನೆ ತುಂಬಾ ಜನಪ್ರಿಯ ಸ್ತೋತ್ರವಾಗಿದೆ.

ಹೀಗೆ ಚಿಪ್ಪಗಿರಿಯಲ್ಲಿ ನೆಲೆಸಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಭಗವಂತನ ಧ್ಯಾನದಲ್ಲಿ ನಿರತರಾಗಿರುತ್ತ ತಮ್ಮ ಎಪ್ಪತ್ತಮೂರನೆಯ ವಯಸ್ಸಿನಲ್ಲಿ ತಿರುಪತಿಯ ಬ್ರಹ್ಮೋತ್ಸವಕ್ಕೆ ಯಾತ್ರೆ ಹೋಗಿ ಬಂದವರು ಕ್ರಿ.ಶ. 13-11-1755ರಲ್ಲಿ ಯುವ ಸಂವತ್ಸರದ

ಶಕ 1677 ರಲ್ಲಿ ಕಾರ್ತಿಕ ಶುದ್ಧ ದಶಮಿ ಗುರುವಾರ ಪ್ರಹರದಲ್ಲಿ ಶ್ರೀಹರಿಪಾದವನ್ನು ಸೇರಿದರು. ಭಕ್ತರು ಪ್ರತಿವರ್ಷ ಕಾರ್ತಿಕ ಶುದ್ಧ ನವಮಿ ದಶಮಿ ಏಕಾದಶಿಗಳಂದು ಚಿಪ್ಪಗಿರಿಯಲ್ಲಿ ವಿಜಯದಾಸರ ಆರಾಧನೆಯನ್ನು ನಡೆಸುತ್ತಾರೆ. ವಿಜಯದಾಸರನ್ನು ಆವರ ಮಹಿಮಾತಿಶಯಗಳನ್ನು ಆವರ ಶಿಷ್ಯರು ಪ್ರಶಿಷ್ಯರು ಬಗೆ ಬಗೆಯಾಗಿ ಕೊಂಡಾಡಿದ್ದಾರೆ. ಅಂತಹ ಮಹಾಗುರುಗಳ ಕರುಣೆ ನಮ್ಮೆಲ್ಲರ ಮೇಲೆ ಸದಾ ಇರಲಿ ಎಂದು ಪ್ರಾರ್ಥಿಸೋಣ.